

# ಮಾಟಿ ನಿನಗ್ಯಾರು ಸಾಟಿ?



**ಕಿವಿಯೋಲೆಗಳಿಗೆ ಹೊಂದಿಕೊಂಡಂತೆ ಕಿವಿಯ ಹಿಂಭಾಗದ ತಲೆಗೂದಲಿಗೆ ಸಿಕ್ಕಿಸಿಕೊಳ್ಳುವ ಮಾಟಿಯಲ್ಲೂ ಹಲವು ವೈವಿಧ್ಯವಿದೆ. ಮದುವೆ ಮುಂಜಿಗಳಂತಹ ಸಮಾರಂಭ ಹಾಗೂ ಹಬ್ಬಹರಿದಿನಗಳಲ್ಲಿ ಮಾಟಿ ಧರಿಸಿಕೊಂಡರೆ ಗ್ರ್ಯಾಂಡ್ ಲುಕ್ ಕೊಡುತ್ತದೆ.**

**■ ಆಶಾ ಎಸ್. ಕುಲಕರ್ಣಿ**

ಹಳೆಯ ಫ್ಯಾಷನ್‌ಗಳು ಹೊಸ ರೂಪ, ಹೊಸ ವಿನ್ಯಾಸ ಪಡೆದು ಮತೆ ಮತೆ ಫ್ಯಾಷನ್ ಲೋಕಕ್ಕೆ ಎಂಟ್ರಿ ಕೊಡುವುದು ಸರ್ವೇಸಾಮಾನ್ಯ. ಮಹಿಳೆಯರು ಆಭರಣಪ್ರಿಯರು ಎಂಬುದರಲ್ಲಿ ಎರಡು ಮಾತಿಲ್ಲ. ತಾವು ಧರಿಸುವ ಎಲ್ಲಾ ಆ್ಯಕ್ಸೆಸರೀಸ್‌ಗಳಲ್ಲೂ ವೈವಿಧ್ಯ ಇರಬೇಕೆಂದು ಬಯಸುವುದು ಸಹಜವೇ. ಅದರಲ್ಲೂ ಕಿವಿಯೋಲೆ, ಕಾಲ್ಗೆಜ್ಜೆ, ಬಿಂದಿ, ನೇಲ್‌ಪಾಲಿಷ್, ಉಡುಪು ಎಲ್ಲವನ್ನೂ ಮ್ಯಾಚ್ ಮಾಡಿ ನೋಡಿಯೇ ಧರಿಸುತ್ತಾರೆ. ಹೀಗಿರುವಾಗ ಇಂದಿನ ಯುವ ಪೀಳಿಗೆಯ ಯುವತಿಯರು ಟ್ರೆಂಡಿಂಗ್‌ನಲ್ಲಿ ಏನೇ ಬರಲಿ ಅದನ್ನೇ ಕೊಂಡು ಧರಿಸಲು ಇಷ್ಟಪಡುತ್ತಾರೆ. ಇವರೆಲ್ಲರ ಅಭಿರುಚಿಗೆ ತಕ್ಕಂತೆ ಇದೀಗ ಮಾಟಿ ಕಿವಿಯೋಲೆಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದು ಯುವತಿಯರ ಹಾಟ್ ಫೇವರೆಟ್ ಎನಿಸಿಬಿಟ್ಟಿವೆ.

ಹೆಣ್ಣು ಮಕ್ಕಳ ಅಲಂಕಾರದಲ್ಲಿ ಕಿವಿಯೋಲೆಯದ್ದೇ ಮಹತ್ವದ ಸ್ಥಾನ. ಇದು